SRI H. M. CHANNABASAPPA —Surely.

ಶ್ರೀ ಜೆ. ಎಲ್. ಕಬಾಡಿ.—ಆರೋಗ್ಯ ಕೇಂದ್ರಕ್ಕೆ ನೇಮಕ ಮಾಡಿದ್ದ ಮಹಿಳಾ ವೈದ್ಯಾಧಿಕಾರಿಯನ್ನು ಯಾವ ಪ್ರಭಾವಕ್ಕೊಳಗಾಗಿ ಬೆಂಗಳೂರಿಗೆ ವರ್ಗಾವಣೆ ಮಾಡಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಭಾವಕ್ಕೊಳಗಾಗಿ ವರ್ಗಾವಣೆ ಮಾಡಿಲ್ಲ.

ಶ್ರೀ ಜೆ.ಎಲ್. ಕಬಾಡೆ —ಹಾಗಾದರೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವಾಗ ವರ್ಗಾವಣೆ ಮಾಡಿದ್ದಾರೆ ಎಂಬುದನ್ನು ಮಾನ್ಯ ಸದಸ್ಯರು ಹೇಳಿದರೆ, ನಾನು ತಿಳಿಸಬಲ್ಲೆ. ಐದಾರು ತಿಂಗಳ ಹಿಂದಿನ ವಿಷಯವಾಗಿದ್ದರೆ, ಅದು ನನಗೆ ಗೊತ್ತಿಲ್ಲ.

ಶ್ರೀ ಪಿ. ಎಂ. ಭಾಂಗಿ.—ಗ್ರಾಮಾಂತರ ಪ್ರದೇಶಗಳಲ್ಲಿ ಸೇವೆ ಮಾಡಲು ಒಪ್ಪದ ಮಹಿಳಾ ವೈದ್ಯಾಧಿಕಾರಿಗಳ ಮೇಲೆ ಸರ್ಕಾರದವರು ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗ್ರಾಮಾಂತರ ಪ್ರದೇಶಗಳಿಗೆ ಹೋಗುವುದಕ್ಕೆ ಒಪ್ಪದಿದ್ದರೆ, ಅವರಿಗವರಪ್ಪೋ ಮನಗೆ ಹೋಗಬೇಕಾಗುತ್ತವೆ.

Release of debtors from money lenders.

86. SRI T. R. SHAMANNA — (Fort) Will the Minis er for Co-operation be pleased to state :—

(*a*) the number of debtors released from the hands of the money-lenders and the approximate value of properties released after the Debt Relief Act came into force (Districtwise figures may be furnished) ;

(*b*) the steps taken to give credit facilities to the needy borrower, particularly of the weaker section after the Debt Relief Act came into force ?

SRI K. H. RANGANATH.— (Minister for Co-operation)

(*a*) 1. No. of debtors released : 1,25,460.

2. Approximate value of properties released : Rs. 7 97,19,337.

(as detailed in the Statement 'A' placed on the Table of the House.) *

(*b*) *Vide* Statement 'B' placed on the Table of the House. *

ಶ್ರೀ ಟಿ. ಆರ್. ಶಾಮಣ್ಣ —ಮಾನ್ಯ ಮಂತ್ರಿಗಳು ನಮಗೆ ಒದಗಿಸಿರುವ ಪಟ್ಟಿಯಲ್ಲಿ ಜಿಲ್ಲಾವಾರು ಅಂಕಿ-ಅಂಶಗಳನ್ನು ವಿವರವಾಗಿ ಕೊಟ್ಟಿದ್ದಾರೆ. ಅವುಗಳನ್ನು ತುಲನೆ ಮಾಡಿ ನೋಡಿದಾಗ, ಕೆಲವು ಜಿಲ್ಲೆಗಳಲ್ಲಿ ಕೋಟ್ಯಾಂತರ ರೂಪಾಯಿಗಳ ಪರಿಹಾರ ಸಿಕ್ಕಿದ್ದರೆ ಇನ್ನು ಕೆಲವು ಜಿಲ್ಲೆಗಳಲ್ಲಿ ಬಹಳ ಕಡಮೆ ಪರಿಹಾರ ಸಿಕ್ಕಿದೆ. ಇದುದರಿಂದ, ಕಡಮೆ ಜನರಿಗೆ ಪರಿಹಾರ ಸಿಕ್ಕಿರುವ ಜಿಲ್ಲೆಗಳಲ್ಲಿ ಸಾಲ ತಗೆದುಕೊಂಡಿರುವವರು ಕಡಿಮೆ ಎಂದು ಅರ್ಥವೇ ? ಅಥವಾ ಪರಿಹಾರ ಕೊಡುವ ವ್ಯವಸ್ಥೆ ಸರಿಯಿಲ್ಲ ಎಂದು ಅರ್ಥವೇ ?

---

* Copies placed in the Karnataka Legislature Library vide No. 6.

† ಶ್ರೀ ಕೆ. ಎಚ್ ರಂಗನಾಥ್. ಯಾರು ಯಾರು ಕಾನೂನು ಪ್ರಕಾರ ಸಬ್ ಡಿವಿಜನಲ್ ಅಫೀಸರಿಗೆ ಅರ್ಜಿ ಕೊಟ್ಟಿದ್ದಾರೆ ಅವರಿಗೆಲ್ಲಾ ಪರಿಹಾರ ಒದಗಿಸಲಾಗಿದೆ. ಕೆಲವು ಕೇಸುಗಳಲ್ಲಿ ರಿಟ್ ಪೆಟಿಷನ್‌ಗಳನ್ನು ಹಾಕಿ, ತಡೆ ಆಜ್ಞೆಗಳನ್ನು ತಂದಿರುವುದರಿಂದ, ಪರಿಹಾರವನ್ನು ಒದಗಿಸಲು ಸಾಧ್ಯವಾಗಿಲ್ಲ ಅರ್ಜಿ ಕೊಡದೇ ಇರಬಹುದು; ಕೊಟ್ಟಿದ್ದರೂ ಕೋರ್ಟಿನಿಂದ ತಡೆ ಆಜ್ಞೆ ತಂದಿರಬಹುದು—ಹೀಗೆ ನಾನಾ ಕಾರಣಗಳಿಂದ ನಿಂತಿರಬಹುದು–ಅಷ್ಟೆ. ಮಾನ್ಯ ಸದಸ್ಯರಿಗೇನಾದರೂ ಇದರ ವಿವರ ಬೇಕಾಗಿದ್ದರೆ, ಬೇರೆ ಪ್ರಶ್ನೆ ಕಳುಹಿಸಿದರೆ ನಾವು ಉತ್ತರ ತರಿಸಿಕೊಡುತ್ತೇವೆ.

ಶ್ರೀ ಟಿ.ಆರ್. ಶಾಮಣ್ಣ.—ಋಣ ಪರಿಹಾರ ಕಾನೂನು ಬಂದ ಮೇಲೆ, ಅನೇಕ ಗ್ರಾಮಾಂತರಗಳಲ್ಲಿ ಮತ್ತು ಪಟ್ಟಣಗಳಲ್ಲಿರುವ ಬಡ ಜನತೆಗೆ ಸಾಲ ದೊರೆಯುವುದು ಬಹಳ ದುಸ್ತರವಾಗಿದೆ. ಇಂಥಾ ಬಡಜನರಿಗೆ ಸಾಲ ಒದಗಿಸಬೇಕೆಂದು ಏರ್ಪಾಡು ಮಾಡಿರುವ ಸಂಘಗಳು ಸಾಲಕ್ಕಾಗಿ ಇರುವ ಅಗಾಧ ಬೇಡಿಕೆಯನ್ನು ಪೂರೈಸುವಷ್ಟು ಸ್ಥಿತಿಯಲ್ಲಿಲ್ಲ ಆದುದರಿಂದ, ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಿ, ಹೆಚ್ಚಿನ ರೀತಿಯಲ್ಲಿ ಬಡವರಿಗೆ ಹಣ ಸಹಾಯವನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲು ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಕೆ. ಎಚ್ ರಂಗನಾಥ್.—ಸಮಸ್ಯೆಯನ್ನೋ ಅಗಾಧವಾಗಿದೆ. ಅದರೆ, ತಕ್ಷಣ ಎಲ್ಲರಿಗೂ ಅನುಕೂಲ ಮಾಡಿಕೊಡುವುದು ಸ್ವಲ್ಪ ಕಷ್ಟದ ಪ್ರಶ್ನೆ. ಈ ವರ್ಷ ನುಮಾರು ಆರವತ್ತು ಕೋಟಿರೂಪಾಯಿಗಳಷ್ಟು ಹಣವನ್ನು ಅಲ್ಪಾವಧಿ ಸಾಲದ ಮುಖಾಂತರ ನಾವು ಅವರಿಗೆ ಕೊಟ್ಟಿದ್ದೇವೆ ಆದರಲ್ಲಿ 15 89 ಕೋಟಿ ರೂಪಾಯಿಗಳನ್ನು 2.81 ಲಕ್ಷ ಸಣ್ಣ ಹಿಡುವಳಿದಾರರಿಗೆ ಕೊಡಲಾಗಿದೆ; ಮತ್ತು 42,163 ಜನ ಹರಿಜನರಿಗೆ ಇದರಲ್ಲಿ ಹಣ ಸಹಾಯ ಒದಗಿಸಲಾಗಿದೆ. ನುಮಾರು 2 91 ಲಕ್ಷ ರೂಪಾಯಿಗಳನ್ನು ನುಮಾರು 15 ಸಾವಿರ ಸ್ಮಾಲ್ ಫಾರ್ಮರ್ಸ್‌ಗೆ ಕೊಡಲಾಗಿದೆ. ಕನ್‌ಸಂಪಷನ್ ಲೋನನ್ನು ಕೊಡಬೇಕು ಎಂದು ನಾವು ಒಂದು ವಿಚಾರ ಮಾಡಿದ್ದೇವೆ. ಅದರ ಪ್ರಕಾರ ಇಂದು ನಮಗೆ ಬೇಕಾಗತಕ್ಕಂಥ ಹಣ ನುಮಾರು 6.37 ಕೋಟಿ ರೂಪಾಯಿಗಳು. ಇದನ್ನು ಯಾವ ರೀತಿಯಾಗಿ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್ —ಈಗಾಗಲೇ ಕೆಲವರು ರಿಟ್ ಅಪ್ಲಿಕೇಷನ್ಸ್ ಅನ್ನು ಹಾಕಿದ್ದಾರೆಂದು ತಾವು ಹೇಳಿದಿರಿ, ಇದರ ಬಗ್ಗೆ ತಾವು ಏನು ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೀರಿ? ಋಣ ಪರಿಹಾರ ಕಾಯಿದೆಯ ಪ್ರಕಾರ ಯಾರಿಗೆ ಪರಿಹಾರ ಸಿಕ್ಕಬೇಕೋ ಅವರಿಗೆ ಪರಿಹಾರ ಸಿಕ್ಕದೆ ಇರುವ ರೀತಿಯಲ್ಲಿ ಅರ್ಜಿಗಳನ್ನು ಹಾಕಿಕೊಂಡಿದ್ದಾರೆ ಇದಕ್ಕೆ ತಾವು ಏನು ಕ್ರಮ ತೆಗೆದು ಗೊಂಡಿದ್ದೀರಿ ?

ಶ್ರೀ ಕೆ. ಎಚ್. ರಂಗನಾಥ್.—ನಾವು ಇಲ್ಲಿ ಕೊಟ್ಟಿರತಕ್ಕದ್ದು ಕೇವಲ ಪ್ಲೆಡ್ಜರೋನ್ ಮಾತ್ರ. ಗಿರಿವಿ ಇಟ್ಟು ತಮ್ಮ ಸಾಮಾನುಗಳನ್ನು ಕಳೆದುಕೊಳ್ಳುವ ಸ್ಥಿತಿ ಯಾರಿಗೆ ಇದೆ, ಮತ್ತು ಯಾರ ಆದಾಯ 2400 ರೂಪಾಯಿಗಳಿಗಿಂತ ಕಡಿಮೆ ಇದೆ ಅಂಥವರ ಬಗ್ಗೆ ಈ ಪರಿಹಾರ ದೊರಕತ್ತದೆ. ಇಂಥವರು ನುಮಾರು 1,25,460 ಜನ ಇದ್ದಾರೆ. ನಾವು ಕೊಟ್ಟಿರತಕ್ಕಾದ್ದು ಕೇವಲ ಪ್ಲೆಡ್ ಲೋನ್ 2400 ರೂಪಾಯಿಗಳಿಗೆ ಕೆಳಗೆ ಯಾರ ಆದಾಯ ಇರುತ್ತದೆ, ಅಂಥವರು ಯಾರು ಸಬ್ ಡಿವಿಜನಲ್ ಆಫೀಸರ್‌ಗೆ ಅರ್ಜಿಯನ್ನು ಹಾಕಿದ್ದಾರೆ ಅವರಿಗೆ ಮತ್ತು ದುರ್ಬಲ ವರ್ಗದವರಿಗೆ ಅವರ ಋಣವನ್ನು ಡಿಸ್‌ಚಾರ್ಜ ಮಾಡುವುದಕ್ಕೋಸ್ಕರ ಹಣ ಕೋಟ್ಟಿದ್ದೇವೆ. ಇಂಥ ಅಂಕಿ ಸಂಖ್ಯೆಯನ್ನು ಕೊಡುವುದಕ್ಕೆ ನಮಗೆ ಸಾಧ್ಯವಾಗಲಿಕ್ಕಿಲ್ಲ ಒಟ್ಟು ಮೊತ್ತ ತಮಗೆ ಕಡಿಮೆ ಕಾಣಬಹುದು ಆದನ್ನೂ ಕೂಡ ಲೆಕ್ಕ ಹಾಕಿದರೆ ಹೆಚ್ಚಾಗುತ್ತದೆ.

ಶ್ರೀ ಎಂ ಎಸ್ ಕೃಷ್ಣನ್ —ತಾವು 2400 ರೂಪಾಯಿಗಳ ಆದಾಯಕಿಂತ ಕಡಿಮೆ ಇರುವವರ ಋಣ ಪರಿಹಾರಕ್ಕೆ ಇಷ್ಟು ಹಣವನ್ನು ಕೊಟ್ಟು ಡಿಸ್‌ಚಾರ್ಜ್ ಎಂದು ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ, ಆದರೆ ಇಂದಿಗೂ ಇಂಥವರು ಡಿಸ್‌ಚಾರ್ಜ ಆಗದೆ ನಗರಗಳಲ್ಲಿ ಯಾರಿದ್ದಾರೆ, ಅಂಥವರಿಗೆ ಸಾಲ ಕೊಟ್ಟಿರುವವರು ಇವತ್ತು ಕೋರ್ಟಿಗೆ ಹೋಗಿದ್ದಾರೆ. ಇಂಥವರ ಬಗ್ಗೆ ತಾವು ಯಾವ ಕ್ರಮವನ್ನು ಕೈಗೊಂಡಿದ್ದೀರಿ ?

ಶ್ರೀ ಕೆ. ಎಚ್. ರಂಗನಾಥ್.—ಇದರ ಬಗ್ಗೆ ನಾವು ಎರಡು ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೇವೆ ಈ ವಿಷಯ ಕೋರ್ಟಿನಲ್ಲಿದೆ, ಇಷ್ಟರಲ್ಲಿಯೇ ಕಿಯರಿಂಗ್ ಗೆ ಬರಬಹುದು, ಇವೆರಡು ಆಗಿ ಇತ್ಯರ್ಥ ಆಗುವುದಕ್ಕೆ ತಡವಾಗುತ್ತದೆ.

ಶ್ರೀ ಟಿ ಆರ್. ಶಾಮಣ್ಣ —ರಾಷ್ಟ್ರೀಕೃತ ಬ್ಯಾಂಕುಗಳಿಂದ ಮತ್ತು ಕೆಲವು ಕೋ ಆಪರೇಟೀವ್ ಸೊಸೈಟಿಗಳವರಿಂದ ದುರ್ಬಲವರ್ಗದವರಿಗೆ ಮತ್ತು ಹಣ ಅಗತ್ಯವಾಗಿ ಬೇಕಾದವರಿಗೆ ಸಾಲ ಸಿಕ್ಕುವುದು ಬಹಳ ಕಷ್ಟವಾಗುತ್ತದೆ. ಗಿರಿಜನರು ಮಾರ್ವಾಡಿಗಳಿಂದ ಹಣ ಪಡೆಯುತ್ತಿದ್ದ ಪದ್ಧತಿ ಮೊದಲಿನಿಂದಲೂ ಇತ್ತು. ಈಗ ಸಾಲ ಸಿಕ್ಕುವುದು ಬಹಳ ಕಷ್ಟವಾಗಿರುವುದರಿಂದ ಬ್ಯಾಂಕುಗಳವರು ಮತ್ತು ಕೋ ಆಪರೇಟೀವ್ ಸೊಸೈಟಿಗಳವರು ತಮ್ಮ ವ್ಯವಹಾರವನ್ನು ಸಾಧ್ಯವಾದಷ್ಟು ಮಟ್ಟಿಗೆ ಸುಲಭ ಮಾಡಿಕೊಂಡು ಬಡವರಿಗೆ ಜಾಗ್ರತೆಯಾಗಿ ಸಾಲ ಸಿಕ್ಕುವಂಥ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಈಗಾಗಲೇ ಇದರ ಬಗ್ಗೆ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಎಲ್ಲೆಲ್ಲಿ ಜಿರ್ನಾ ಬ್ಯಾಂಕ್ ಗಳು ಸದ್ಯಿಧವಾಗಿವೆ ಮತ್ತು ಅದಕ್ಕೆ ಸೇರತಕ್ಕ ಸಹಕಾರ ಸಂಘಗಳಿಂದ ಡಿಪಾಸಿಟ್ಸ್ ಮೊಬಿಲೈಸ್ ಮಾಡಿ, ಬಡವರಿಗೆ ಸಾಲದ ವ್ಯವಸ್ಥೆಯನ್ನು ಮಾಡಬೇಕು ಎಂದು ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಗೂಡಿಸುವುದಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ. ಆಗಲೇ ಹೇಳಿದಂತೆ ನಮಗೆ ಸುಮಾರು 6 7 ಲಕ್ಷ ರೂಪಾಯಿಗಳು ಇದಕ್ಕಾಗಿ ಬೇಕಾಗಿರುತ್ತದೆ ಈ ಹಣವನ್ನು ಯಾವ ರೀತಿಯಾಗಿ ಒದಗಿಸ ಬೇಕು ಹೇಗೆ ಮಾಡಬೇಕು ಎನ್ನುವುದನ್ನು ಬಹಳ ತೀವ್ರತೆಯಿಂದ ನಾವು ಯೋಚನೆ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಇದರ ಬಗ್ಗೆ ಒಂದು ಅಭಿಪ್ರಾಯವನ್ನು ಹೇಳಿದ್ದಾರೆ, ಸರ್ಕಾರದವರು ಬಡವರಿಗೆ ಸಾಲ ಕೊಡುವ ವ್ಯವಸ್ಥೆಗೆ ಗ್ಯಾರಂಟಿ ಕೊಡುವ ಒಂದು ಅಭಿಪ್ರಾಯವನ್ನು ಅವರು ವ್ಯಕ್ತ ಮಾಡಿದ್ದಾರೆ. ಇದು ಅಗಧವಾ ರತಕ್ಕ ಪ್ರಶ್ನೆಯಾಗಿರುವುದರಿಂದ ನಾವು ತುಂಬಾ ಯೋಚನೆ ಮಾಡಬೇಕಾಗಿರುತ್ತದೆ. ನಮ್ಮ ರಾಜ್ಯದಲ್ಲಿ ಮೂರು ಕೋಟಿ ಪ್ರಜಾಸಂಖ್ಯೆಯಲ್ಲಿ ಒಂದು ಕೋಟಿ ಪ್ರಜಾಸಂಖ್ಯೆಗೆ ಈ ಕಾನೂನಿನ ಅನ್ವಯವಾಗಿ ಅನುಕೂಲವನ್ನು ಪಡೆಯುತ್ತಾರೆ. ಈ ಒಂದು ಕೋಟಿ ಪ್ರಜಾಸಂಖ್ಯೆಗೆ ಅನುಕೂಲ ಮಾಡತಕ್ಕದ್ದು ಒಂದೆರಡು ದಿವಸಗಳಲ್ಲಿ ಆಗುವ ಕೆಲಸವಲ್ಲ. ಈ ರೀತಿಯಾಗಿ ಯಾರು ಭಾವಿಸಬಾರದು ಸರ್ಕಾರದವರು ಈ ದಿಸೆಯಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ತೀವ್ರಗತಿಯಲ್ಲಿ ಯೋಚನೆ ಮಾಡುತ್ತಿದ್ದಾರೆ.

ಹರಿಜನ, ಗಿರಿಜನ ಮುಂತಾದವರಿಗೆ ವಸತಿ ಹಾಗೂ ಶಿಕ್ಷಣದ ಸೌಲಭ್ಯಗಳನ್ನು ಒದಗಿಸುವುದು

328. ಶ್ರೀ ವಿ. ವಿ. ಪಾಟೀಲ (ಶಿರಹಟ್ಟಿ)—ಸಮಾಜಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನಲ್ಲಿ ಹರಿಜನ, ಗಿರಿಜನ, ಡೋರ, ಚಮ್ಮಾರ ಸಂಖ್ಯೆ ಎಷ್ಟು;

(ಆ) ಅವರಿಗೆ ವಸತಿ ಸೌಕರ್ಯ ಶಿಶುವಿಹಾರ, ಬಾಲವಾಡಿಗಳನ್ನಾಗಲಿ, ಸರಕಾರ ವ್ಯವಸ್ಥೆ ಮಾಡಿದೆಯೇ ಅವು ಯಾವ ಯಾವ ಊರುಗಳಲ್ಲಿ ಇವೆ;

(ಇ) ಲಕ್ಷೇಶ್ವರ, ಶಿರಹಟ್ಟಿ, ಬೆಳ್ಳಟ್ಟಿ, ಶಿಗ್ಗಲಿ, ಹೆಬ್ಬಾಳಗಳಲ್ಲಿ ಹರಿಜನ, ಗಿರಿಜನ, ಡೋರ, ಚಮ್ಮಾರ ಜನವಸತಿ ಅಷ್ಟು ಸಂಖ್ಯೆಯಲ್ಲಿದ್ದು ಸರಕಾರದ ಗಮನಕ್ಕೆ ಬಂದಿದೆಯೆ;

(ಈ) ಆ ಜನರ ಬಗ್ಗೆ ಆಯಾ ಊರುಗಳಲ್ಲಿಯೇ ವಸತಿಗೃಹಗಳನ್ನು, ಬಾಲವಾಡಿಗಳನ್ನು ಸರಕಾರ ಪ್ರಾರಂಭಿಸಲು ಕ್ರಮ ಕೈಕೊಳ್ಳಲು ಉದ್ದೇಶಿಸಿದೆಯೆ;